ಕರ್ನಾಟಕ ಸರಕಾರ

ಸಂ:ಸಿಎಸ್‌ಡಿ-ಕೆಎಸ್‌ಎನ್:1(12):2009-10 ಜಿಲ್ಲಾ ಪಂಚಾಯತ ಕಾರ್ಯಾಲಯ

(ಆಹಾರ) ರಾಯಚೂರು

ದಿನಾಕ:06-03-2010

## ಅಧಿಕೃತ ಜ್ಞಾಪನ

ವಿಷಯ:- ಮಾರ್ಚ-2010 ರ ಮಾಹೆಗೆ ರಾಯಚೂರು ಜಿಲ್ಲೆಯ ಗ್ರಾಮಾಂತರ ಪ್ರದೇಶದ ಪಡಿತರ ಚೀಟಿದಾರರಿಗೆ ವಿತರಣೆ ಮಾಡಲು ತಾಲೂಕವಾರು ಸೀಮೆಎಣ್ಣೆ ಹಂಚಿಕೆ ಬಗ್ಗೆ .

ಉಲ್ಲೇಖ:- ಮಾನ್ಯ ಆಯುಕ್ತರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು ಇವರ ಅಧಿಕೃತ ಜ್ಞಾಪನ ಪತ್ರ ಸಂ:CFS:PD:III:27(8): 2009-10 ದಿನಾಂಕ: 02-03-2010.

000

ಉಲ್ಲೇಖಿತ ಅಧಿಕೃತ ಜ್ಞಾಪನ ಪತ್ರದ ಮುಖಾಂತರ ಮಾನ್ಯ ಆಯುಕ್ತರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು ಇವರು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮಾರ್ಚ-2010ರ ಮಾಹೆಗೆ 1356 ಕೆ.ಎಲ್.ಸೀಮೆಎಣ್ಣೆ ಬಿಡುಗಡೆ ಮಾಡಿ ಜಿಲ್ಲೆಯ ಗ್ರಾಮಾಂತರ ಪ್ರದೇಶದ ಎಲ್ಲಾ ಭಾವಚಿತ್ರ ಸೆರೆ ಹಿಡಿಯಲಾದ ನೆಮ್ಮದಿ ಪೂರ್ವ ಮತ್ತು ನೆಮ್ಮದಿ ಅನಿಲ ರಹಿತ ಪಡಿತರ ಚೀಟಿಗೆ ಮಾತ್ರ 3 ಲೀಟರನಂತೆ ಸೀಮೆಎಣ್ಣೆಯನ್ನು ಮರು ಹಂಚಿಕೆ ಮಾಡಲು ಸೂಚಿಸಿರುತ್ತಾರೆ.

ಜಿಲ್ಲೆಯ ಎಲ್ಲಾ ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ತಾಲೂಕಿನ ಗ್ರಾಮಾಂತರ ಪ್ರದೇಶದಲ್ಲಿರುವ ಎಲ್ಲಾ ಗ್ಯಾಸ ರಹಿತ ಪಡಿತರ ಚೀಟಿಗೆ 3 ಲೀಟರನಂತೆ ಪಡಿತರ ಚೀಟಿಗಳ ಆಧಾರದ ಅನ್ವಯ ಹಾಗೂ ನ್ಯಾಯಬೆಲೆ ಅಂಗಡಿಗಳಲ್ಲಿ ಉಳಿದಿರುವ ಸೀಮೆಎಣ್ಣೆ ಪ್ರಮಾಣವನ್ನು ಲೆಕ್ಕಕ್ಕೆ ತೆಗೆದುಕೊಂಡು ಮರು ಹಂಚಿಕೆ ಆದೇಶ ಹೊರಡಿಸುವಂತೆ ಸೂಚಿಸಿದೆ ಹಾಗೂ ಹಂಚಿಕೆ ಆದೇಶದ ಪ್ರತಿಯನ್ನು ತಪ್ಪದೇ ಈ ಕಛೇರಿಗೆ ಕೂಡಲೆ ಸಲ್ಲಿಸಲು ತಿಳಿಸಲಾಗಿದೆ .

ಜಿಲ್ಲೆಯ ಎಲ್ಲಾ ಸಗಟು ಸೀಮೆಎಣ್ಣೆ ವರ್ತಕರು ತಮಗೆ ಬಿಡುಗಡೆ ಮಾಡಿದ ಸೀಮೆಎಣ್ಣೆಯನ್ನು ಲ್ಯಾಪ್ಸ ಮಾಡದೆ ಪೂರ್ಣವಾಗಿ ಎತ್ತುವಳಿ ಮಾಡ ತಕ್ಕದ್ದು .

ಸೀಮೆಎಣ್ಣೆಯ ಹಂಚಿಕೆ ಮಾಡಲಾದ ತಾಲೂಕುವಾರು ಪ್ರಮಾಣ ಮತ್ತು ಸಗಟು ವರ್ತಕರ ವಿವರಗಳು ಈ ಕೆಳಗೆ ಕಾಣಿಸಿದ ತಖ್ತೆಯಲ್ಲಿ ತೋರಿಸಲಾಗಿದೆ. ಸಗಟು ವರ್ತಕರಿಂದ ನ್ಯಾಯಬೆಲೆ ಅಂಗಡಿಯವರು ಎತ್ತುವಳಿ ಮಾಡುವ ಕೊನೆಯ ದಿನಾಂಕ:20-03-2010 ರಂದು ನಿಗದಿ ಪಡಿಸಲಾಗಿದೆ. ಕಾರ್ಯನಿರ್ವಾಹಕ ಅಧಿಕಾರಿಗಳು ಎತ್ತುವಳಿ ಅವಧಿಯನ್ನು ಯಾವುದೇ ಕಾರಣಕ್ಕೂ ವಿಸ್ತರಿಸಬಾರದು ಮತ್ತು ಪಡಿತರ ಚೀಟಿದಾರರಿಗೆ ಹೊರತು ಪಡಿಸಿ ಯಾವುದೇ ಇತರ ಉದ್ದೇಶಗಳಿಗೆ ಸೀಮೆಎಣ್ಣೆಯನ್ನು ಬಿಡುಗಡೆ ಮಾಡಕೂಡದು. ಕಾಯ್ದಿರಿಸಿರುವ ಸೀಮೆಎಣ್ಣೆಯನ್ನು ಯಾವುದೇ ಕಾರಣಕ್ಕೂ ಬಳಸಬಾರದು .

ಎತ್ತುವಳಿ ಮಾಡಲಾದ ಸೀಮೆಎಣ್ಣೆಯು ಮಾರ್ಗಾಂತರಗೊಳ್ಳದಂತೆ ಎಚ್ಚರ ವಹಿಸಿ ವಿತರಿಸಲು ಸೂಚಿಸಿದೆ ದೂರುಗಳಿಗೆ ಆಸ್ಪದ ನೀಡದೆ ನಿಗದಿತ ದರ ಹಾಗೂ ಪ್ರಮಾಣದಲ್ಲಿ ಸೀಮೆಎಣ್ಣೆ ವಿತರಣೆಗೆ ಕ್ರಮ ವಹಿಸುವುದು ತಪ್ಪಿದಲ್ಲಿ ಸಂಬಂಧಿಸಿದ ಕಾರ್ಯನಿರ್ವಾಹಕ ಸಿಬ್ಬಂದಿಯವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು .

**ಪುಟ 2 ಕ್ಕೆ ...**

(ಪ್ರಮಾಣ ಕೆ.ಎಲ್.ಗಳಲ್ಲಿ)

| ಕ್ರ ಸಂ | ತಾಲೂಕಿನ ಹೆಸರು | ಅನಿಲ | ಅನಿಲ ರಹಿತ | ಒಟ್ಟು ಪಡಿತರ ಚೀಟಿ | ಸೀಮೆ ಎಣ್ಣೆ ಬೇಡಿಕೆ | ಆರಂಭದ ಶಿಲ್ಕು ಕಾಯ್ದಿರಿಸಿರುವ ದಾಸ್ತಾನು | ಸೀಮೆ ಎಣ್ಣೆ ಹಂಚಿಕೆ | ನಿಯೋಜಿಸಲಾದ ಸಗಟು ಸೀಮೆ ಎಣ್ಣೆ ವರ್ತಕರ ಹೆಸರು | ಮಿಸಲು ದಾಸ್ತಾನು |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | ರಾಯಚೂರು | 4622 | 53544 | 58166 | 160.632 | 14.745 | 66.134 | ನರೋತ್ತಮದಾಸ ಪರೋಗಜೀ | 11.998 |
| | | | | | | 20.430 | 11.438 | ತಿರುಮುಲ ಏಜೆನ್ಸಿ ರಾಯಚೂರು | 11.677 |
| | | | | | | 4.590 | 43.295 | ಹಸಮುಖಲಾಲ್ ಮಗನಲಾಲ್ ರಾಯಚೂರು | 10.815 |
| 2 | ಸಿಂಧನೂರು | 5901 | 64523 | 70424 | 193.569 | - | 54.780 | ಪ್ರಭುದಾಸ ಜಗಜೀವನದಾಸ ಸಿಂಧನೂರು | 12.000 |
| | | | | | | - | 138.789 | ತಿರುಮುಲ ಏಜೆನ್ಸಿ ರಾಯಚೂರು | |
| 3 | ದೇವದುರ್ಗ | 679 | 42700 | 43379 | 128.100 | 12.000 | 116.100 | ಹಸಮುಖಲಾಲ್ ಮಗನಲಾಲ್ ದೇವದುರ್ಗ | 4.060 |
| 4 | ಮಾನವಿ | 4163 | 60825 | 64988 | 182.475 | 0.235 | 69.696 | ಏಲಿ ಗುರುನಾಥಪ್ಪ & ಕಂಪನಿ ರಾಯಚೂರು | |
| | | | | | | - | 31.866 | ಹಸಮುಖಲಾಲ್ ಮಗನಲಾಲ್ ರಾಯಚೂರು | |
| | | | | | | 6.350 | 74.328 | ಪ್ರಭುದಾಸ ಜಗಜೀವನದಾಸ ರಾಯಚೂರು | |
| 5 | ಲಿಂಗಸೂಗೂರು | 2529 | 60401 | 62930 | 181.203 | - | 85.215 | ಸೋಹನಕುಮಾರ & ಕಂಪನಿ ಲಿಂಗಸೂಗೂರು | |
| | | | | | | 15.901 | 80.087 | ಎಸ್.ಎಸ್.ಶಟ್ಟಿ ಮಾನವಿ ಸೋಹನಕುಮಾರ ಮುಖಾಂತರ | 15.968 |
| | **ಒಟ್ಟು** | **17894** | **281993** | **299887** | **845.979** | **74.251** | **771.728** | | **66.578** |

ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಜಿಲ್ಲಾ ಪಂಚಾಯತ ರಾಯಚೂರು

ಪ್ರತಿಯನ್ನು:-

1) ಮಾನ್ಯ ಆಯುಕ್ತರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು ರವರ ಅವಗಾಹನೆಗಾಗಿ ಸಲ್ಲಿಸಿದೆ .
2) ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಜಿಲ್ಲಾ ಪಂಚಾಯತ ರಾಯಚೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3) ಜಿಲ್ಲೆಯ ಎಲ್ಲಾ ತಾಲೂಕಾ ಪಂಚಾಯತ ಕಾರ್ಯನಿವಾಹಕ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ
4) ಸಂಬಂಧಪಟ್ಟ ಸಗಟು ಸೀಮೆಎಣ್ಣೆ ವರ್ತಕರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ
5) ಸೇಲ್ಸ ಆಫೀಸರ IOC/HPC/BPC ತೈಲ ಕಂಪನಿಗಳು ರಾಯಚೂರು ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ
6) ಜಿಲ್ಲೆಯ ಎಲ್ಲಾ ಆಹಾರ ನಿರೀಕ್ಷಕರಿಗೆ ಕಳುಹಿಸುತ್ತಾ ಸದರಿ ಹಂಚಿಕೆ ಆದೇಶದ ಪ್ರತಿಯನ್ನು ನಿಮ್ಮ ತಾಲೂಕಿನ ಸಾರ್ವಜನಿಕ ಸಂಪರ್ಕವುಳ್ಳ ಎಲ್ಲಾ ಕಛೇರಿಗಳಲ್ಲಿ ಪ್ರಕಟಿಸಲು ಹಾಗೂ ಸ್ಥಳೀಯ ಎಲ್ಲಾ ಪ್ರಜಾ ಪ್ರತಿನಿಧಿಗಳಿಗೆ ಮಾಹಿತಿಗಾಗಿ ಕಳುಹಿಸಲು ಸೂಚಿಸಿದೆ.